ಮಂಜಾಡಿ ಹೈಸ್ಕೂಲಿನ ಗೇಟ್ ಒಳಗೆ ಕಾಲಿರಿಸುತ್ತಲೇ ಕೇತಕಿಗೆ ದುಃಖ ಉಮ್ಮಳಿಸಿತು. ಈ ಗೇಟ್ ತನಕ ಪ್ರತೀದಿನವೂ ನಿತ್ಯಪೂಜೆಯಂತೆ ಸಂದೀಪ ಬೈಕಿನಲ್ಲಿ ಅವಳನ್ನು ಡ್ರಾಪ್ ಮಾಡಿ, 'ನೋಡು, ನಿನ್ನನ್ನು ಇಲ್ಲಿವರೆಗೂ ಹೊತ್ತುಕೊಂಡು ಬಂದ ಬೈಕಿಗೂ, ಅದನ್ನು ಪ್ರೀತಿಯಿಂದ ಓಡಿಸಿದ ನನಗೂ ಒಂದು ಮುತ್ತು ಕೊಟ್ಟು ಹೋಗು' ಎಂದು ತಮಾಷೆ ಮಾಡುವ ದೃಶ್ಯ ಕಣ್ಣಿನ ಮುಂದೆ ಚಲನಚಿತ್ರದಂತೆ ಓಡಿತು. ತುಂಬಿದ ಕಣ್ಣುಗಳಿಂದ ಹಿಂತಿರುಗಿ ಆಸೆಯಿಂದೊಮ್ಮೆ ನೋಡಿದಳು! ಸಂದೀಪನೇನಾದರೂ ಮಾಯೆಯಂತೆ ಅಲ್ಲಿ ನಗುತ್ತಾ ನಿಂತಿರಬಹುದೇನೋ! ಎಂದು. ಒಂದಷ್ಟು ಮಕ್ಕಳು ಒಳ ಬರುತ್ತಿದ್ದರು. ಮನಸ್ಸು ಬಿಕ್ಕಿತು. ಸಂದೀಪ ಇನ್ನು ಇಲ್ಲ ಎನ್ನುವ ಸಂಗತಿ ಮನದೊಳಕ್ಕೆ ಇಳಿಯುತ್ತಲೇ ಇಲ್ಲ. ನಿಧಾನಕ್ಕೆ ಮೆಟ್ಟಿಲೇರಿಕೊಂಡು ಬಂದು ಆಫೀಸ್ ರೂಮಿನ ಒಳ ಹೊಕ್ಕು ಹಾಜರಿ ಪುಸ್ತಕ ಕೈಗೆತ್ತಿಕೊಂಡಳು. 'ಕೇತಕಿ ಕಾನಿಟ್ಕರ್' ಎಂದು ಸಹಿ ಹಾಕುವಾಗ ಕೈ ಜೀವವಿಲ್ಲದಂತಿತ್ತು. ಕೇತಕಿ ಪಾಟಣಕರ್ ಎಂದು ಹಾಕಲೇ ಎಂದು ಅನಿಸಿತು. ಸಂದೀಪನ ಮುಖ ಕಣ್ಣಿಗೆ ತೇಲಿ ಬರುತ್ತಿದ್ದಂತೆ, 'ಐ ಜಸ್ಟ್ ವಾಂಟ್ ಟು ಬಿ ಫರ್‍ಗಾಟನ್...' ಕಿವಿಗೆ ಅಪ್ಪಳಿಸಿತು. ಮನಸ್ಸು ಮತ್ತೆ ಬಿಕ್ಕಲಾರಂಭಿಸಿತು. ಮಾಮೂಲಿಯಂತೆ ಕೇತಕಿ ಕಾನಿಟ್ಕರ್ ಎಂದು ಸಹಿ ಹಾಕಿ ಭಾರವಾದ ಮನದಿಂದ ಅಧ್ಯಾಪಕರ ಕೊಠಡಿಗೆ ಹೋಗುತ್ತಿರುವಾಗ ಹಿಂದಿನಿಂದ ಸುಗುಣಾ ಟೀಚರ್ ಬಂದು ಕೈ ಹಿಡಿದು ನಿಲ್ಲಿಸಿದರು. 'ಯಾಕ್ ಬರಕ್ಕೆ ಹೋದ್ರಿ, ಒಂದೆರಡು ದಿನವಾದ್ರೂ ಮನೇಲಿರಬಹುದಿತ್ತಲ್ವೇ?' ಒಣಗಿದ್ದ ಕೇತಕಿಯ ಮುಖ ನೋಡಿ, ಮೃದುವಾಗಿ, 'ಕೇತಕಿ ಸಹಜವಾಗಿ ಇರಬೇಕೆಂದು ಪ್ರಯತ್ನಿಸಬೇಡಿ. ನಾವು ಮಾಮೂಲಿ ಮನುಷ್ಯರು. ದುಃಖ ತಡ್ಕೊಬೇಕಿಲ್ಲ. ಮನೆಗೆ ಹೋಗಿ, ನಾನು ಎಚ್ಚೆಮ್‌ಗೆ ಹೇಳ್ತಿನಿ' ಎಂದರು.

'ಹ್ಮ... ಇಲ್ಲಾ ಮೇಡಂ, ಮನೇಲಿ ಇರಕ್ಕಾಗಲ್ಲ. ಅತ್ತೆಯ ದುಃಖ ನನ್ನ ಸಂಕಟಕ್ಕಿಂತಲೂ ದೊಡ್ಡದು ಅನಿಸುತ್ತಿದೆ. ಅವರನ್ನು ನೋಡಕ್ಕಾಗಲ್ಲ, ಹೊರಟುಬಂದೆ' ಕೇತಕಿ ಮೆಲುವಾಗಿ ಅಂದಾಗ ಸುಗುಣಾ ಟೀಚರ್ ಕೈ ಹಿಡಿದು, 'ಸರಿ ಬನ್ನಿ, ಆದ್ರೆ ಕ್ಲಾಸ್ ತಕೊಳಕ್ಕೆ ಆಗುತ್ತಾ ಕೇತಕಿ?' ಎಂದಾಗ ಸೋತ ದನಿಯಲ್ಲಿ ಕಷ್ಟದಿಂದ, 'ಗೊತ್ತಿಲ್ಲ, ಹೇಗೂ ಮೊದಲೆರಡು ಪೀರಿಯೆಡ್‌ಗಳಿಲ್ಲ. ನೋಡೋಣಾ' ಎನ್ನುತ್ತಾ ಒಳ ಬಂದು ಕುಳಿತಳು. ಹೇಳಲಾಗದ ಸಂಕಟ... ಸಂದೀಪನ ಮುಖ ಮತ್ತೆಮತ್ತೆ ಕಣ್ಣಿಗೆ ಕಟ್ಟುತ್ತಿದೆ... ಜೊತೆಯಲ್ಲೇ ಅವನ ಮಂತ್ರದಂತಹ ಮಾತು, 'ಐ ವಾಂಟ್ ಟು ಬಿ ಫರ್ಗಾಟನ್, ಅಷ್ಟೇ' ರಿಂಗಣಿಸಿದಾಗ ಕಣ್ಣು ತುಂಬಿಕೊಳ್ಳುತ್ತಾ ಹೋಯಿತು. 'ಅಳಬೇಡವೇ ಕೇತಕಿ, ಅಳೋರು ನಂಗಿಷ್ಟ ಇಲ್ಲ. ನಿಂಗೊತ್ತಿದೆ ತಾನೇ...' ಎಂದಂತಾಯಿತು, ಸಂದೀಪ್ ಪಾಟಣಕರ್... ಕಣ್ಣು ಮುಚ್ಚಿದಳು.

★★★

'ಕೇತಕಿ, ಇಷ್ಟ ಇಲ್ಲ ಅಂತ ಹೇಳಿಬಿಡು. ಐ ಆಮ್ ನಾಟ್ ಮೆಂಟ್ ಫಾರ್ ಮ್ಯಾರೇಜ್. ಅರ್ಥ ಮಾಡ್ಕೊ, ನಂಗೇ ಸಾಧ್ಯಾನೇ ಇಲ್ಲ ಮದ್ವೆ ಮ್ಯಾನೇಜ್ ಮಾಡಲು. ಇವ್ರ ಮಾತಿಗೆಲ್ಲ ತಲೆ ಕೊಡ್ಬೇಡಾ. ಯು ಆರ್ ಎಜುಕೇಟೆಡ್. ಟೀಚರ್ ನೀನು. ನಿಂಗೊಳ್ಳೆ ಬೇರೆ ಹುಡ್ಗ ಸಿಕ್ತಾನೆ. ಮುಲಾಜಿಲ್ಲದೇ ಬೇಡ ಅಂತ ಹೇಳಿಬಿಡು' ನಡುನಡುವೆ ಬಾಗಿಲಿನೆಡೆಗೆ ನೋಡುತ್ತಾ ಯಾರಾದ್ರೂ ಬಂದಾರೋ ಎಂದು ಆತಂಕದಿಂದ ಸಂದೀಪ ಪಾಟಣಕರ್ ಹೇಳುತ್ತಿದ್ದರೆ ಕೇತಕಿಗೆ ಅಚ್ಚರಿ. ಹುಡುಗ ಹುಡುಗಿ ಪರ್ಸನಲ್ ಆಗಿ ಮಾತಾಡಿ ಬೇಕಾದ್ರೆ ಅಂದ ಹಿರಿಯರ ಮಾತಿಗೆ ಕಟ್ಟುಬಿದ್ದು ಮಹಡಿ ಮೇಲೆ ಬಂದಿದ್ದವಳಿಗೆ ಸಂದೀಪನ ಈ ಮಾತುಗಳು ವಿಚಿತ್ರವೆನಿಸಿದವು. 'ಮತ್ಯಾಕೆ ಇಲ್ಲಿಗೆ ಬಂದ್ರಿ, ಈ ನಾಟಕ ಎಲ್ಲ ಯಾಕೆ ಬೇಕಿತ್ತು' ಮುಲಾಜಿಲ್ಲದೇ ಕೇಳಿದವಳಿಗೆ ಸಂದೀಪ, 'ಅಯ್ಯೋ, ಆಯಿಯ ನಾಟಕದ ಮುಂದೆ ನಾನು ಶರಣಾದೆ ಮಾರಾಯ್ತಿ. ಮಾತು ಮಾತಿಗೆ ಮದ್ವೆಯಾಗು, ಇಲ್ಲಾಂದ್ರೆ